ಅನುಬಂಧ–1

ಕ್ರ.ಸಂ.	ಕೆರೆಯ ಹೆಸರು	ನಿರ್ಮಾಣದ ವರ್ಷ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ವಿನ್ಯಾಸದ ಅಚ್ಚುಕಟ್ಟು ಎಕರೆಗಳಲ್ಲಿ	ವಾಸ್ತವಿಕ ನೀರಾವರಿ ಪ್ರದೇಶ ಎಕರೆಗಳಲ್ಲಿ
1	ಚಿಕ್ಕನಾಗಾಂವ	1981	4.36	640	45.00 [2005–06]
2	ಬೆಟ್ಟ ಬಾಲಕುಂದಾ ಕೆರೆ	1978	24.82	2618	–
3	ನಾರಾಯಣಪೂರ ಕೆರೆ	1956 ಮುಂಚೆ	5.00	190	–
4	ಹರಕಾಪೂರ ಕೆರೆ	1956 ಮುಂಚೆ	5.00	190	–
5	ಕಲಖೋರಾ ಕೆರೆ	1975	3.25	301	112.00 [2005–06]
6	ತಿಪರಾಂತ ಕೆರೆ	1956 ಮುಂಚೆ	7.00	355	–
7	ಅಟ್ಟುರ ಕೆರೆ	1987	4.93	187	–
8	ಆಲಗೋಡ ಕೆರೆ	1985	61.50	419	–
9	ಹೊನ್ನಳ್ಳಿ ಕೆರೆ	1998	120.00	247	–
10	ಸಿರ್ಗಾಪೂರ ಕೆರೆ	2000	120.00	247	–
11	ಸೈದಾಪೂರ ಕೆರೆ	2006	550.00	642	–

1046 (1528) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಸರಾಸರಿಯಾಗಿ ಪ್ರತಿ ದಿನ ನೋಂದಣಿಯಾಗುವ ದಾಖಲೆಗಳ ಸಂಖ್ಯೆ ಎಷ್ಟು;

ಇ) ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ನೋಂದಣಿ ದಾಖಲೆಗಳನ್ನು ಬೆರಳಚ್ಚು ಮತ್ತು ಸ್ಕ್ಯಾನ್ ಮಾಡುವ ಕೆಲಸಕ್ಕಾಗಿ ಪ್ರತಿಯೊಂದು ಪುಟಕ್ಕೆ ಎಷ್ಟು ಶುಲ್ಕವನ್ನು ಸಾರ್ವಜನಿಕರಿಂದ ವಸೂಲು ಮಾಡಲಾಗುತ್ತಿದೆ;

ಈ) ಈ ಪೈಕಿ ಸರ್ಕಾರಕ್ಕೆ ಪ್ರತಿ ದಾಖಲೆಯಿಂದ (ಪ್ರತಿ ಪುಟದಿಂದ ಬರುತ್ತಿರುವ ಹಣವೆಷ್ಟು);

ಉ) ಈ ಕೆಲಸವನ್ನು ಮಾಡುತ್ತಿರುವವರು ಸರ್ಕಾರಿ ನೌಕರರೇ ಅಥವಾ ಖಾಸಗಿ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಈ ಕೆಲಸವನ್ನು ವಹಿಸಿಕೊಡಲಾಗಿದೆಯೇ;

ಊ) ಈ ಕೆಲಸವನ್ನು ಪೂನಾ ಮೂಲದ ಖಾಸಗಿ ಸಂಸ್ಥೆಯೊಂದಕ್ಕೆ ವಹಿಸಿಕೊಟ್ಟಿರುವುದು ನಿಜವೇ;

ಋ) ಹಾಗಿದ್ದಲ್ಲಿ, ಈ ಗುತ್ತಿಗೆ ನೀಡಿರುವ ವಿವರಗಳೇನು ಹಾಗೂ ಎಷ್ಟು ವರ್ಷಕ್ಕೆ ಮತ್ತು ಎಷ್ಟು ಮೊತ್ತಕ್ಕೆ ಈ ಗುತ್ತಿಗೆಯನ್ನು ವಹಿಸಿಕೊಡಲಾಗಿದೆ;

ಎ) ಈ ಗುತ್ತಿಗೆಯನ್ನು ವಹಿಸಿಕೊಡುವಾಗ ಅನುಸರಿಸಿದ ಮಾನದಂಡಗಳೇನು;

ಏ) ಇದನ್ನು ಟೆಂಡರ್ ಮೂಲಕ ವಹಿಸಲಾಗಿದೆಯೇ;

ಐ) ಇಲ್ಲದಿದ್ದಲ್ಲಿ, ಈಗ ಈ ಗುತ್ತಿಗೆಯನ್ನು ವಹಿಸಿಕೊಟ್ಟಿರುವ ಸಂಸ್ಥೆಯಿಂದ ಹಿಂದಕ್ಕೆ ಪಡೆದು ಟೆಂಡರ್ ಮೂಲಕ ಇದನ್ನು ವಹಿಸಿಕೊಟ್ಟು 'ಬೆಂಗಳೂರು ಒನ್' ಸಂಸ್ಥೆಗಳ ಮಾದರಿಯಲ್ಲಿ ಇಲ್ಲಿಗೆ ವಿದ್ಯಾವಂತ ನಿರುದ್ಯೋಗಿಗಳನ್ನು/ಅಂಗವಿಕಲರನ್ನು ನೇಮಕ ಮಾಡಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಉತ್ತರ ಆದಾಯದ ಜೊತೆಗೆ ನಿರುದ್ಯೋಗಿಗಳಿಗೆ ಸಹಾಯ ಮಾಡಿದಂತಾಗುವುದಿಲ್ಲವೇ;

ಒ) ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಉಪ ನೋಂದಣಿ ಕಛೇರಿಗಳ ಸಂಖ್ಯೆ: 203 ಜಿಲ್ಲಾವಾರು ಉಪ ನೋಂದಣಿ ಕಛೇರಿಯ ಅಂಕಿ ಅಂಶಗಳ ವಿವರವನ್ನು ಅನುಬಂಧ-ಅ ರಲ್ಲಿ ನೀಡಲಾಗಿದೆ.

ಆ) ಉಪ ನೋಂದಣಿ ಕಛೇರಿಗಳಲ್ಲಿ ಪ್ರತಿ ದಿನ ಸರಾಸರಿ 3562 ದಸ್ತಾವೇಜುಗಳು ನೋಂದಣಿಯಾಗುತ್ತವೆ.

ಇ) ನೋಂದಾಯಿಸಲ್ಪಡುವ ದಸ್ತಾವೇಜುಗಳ ಪ್ರತಿ ಪುಟಕ್ಕೆ ರೂ.30/- (ರೂಪಾಯಿ ಮೂವತ್ತು) ರಂತೆ ಸ್ಕ್ಯಾನಿಂಗ್ ಶುಲ್ಕ ವಸೂಲಾಯಿಸಲಾಗುತ್ತಿದೆ.

ಈ) ಬೆಂಗಳೂರು ನಗರ ಜಿಲ್ಲೆಯ ಉಪ ನೋಂದಣಿ ಕಛೇರಿಗಳಲ್ಲಿ ಸ್ಕ್ಯಾನ್ ಮಾಡಲ್ಪಡುವ ಪ್ರತಿ ಪುಟದಿಂದ ರೂ.14/- ಹಾಗೂ ಇತರ ಜಿಲ್ಲೆಯ ಉಪ ನೋಂದಣಿ ಕಛೇರಿಗಳಲ್ಲಿ ಸ್ಕ್ಯಾನ್ ಮಾಡಲ್ಪಡುವ ಪ್ರತಿ ಪುಟದಿಂದ ರೂ.5/- ಆದಾಯವು ಸರ್ಕಾರಕ್ಕೆ ಬರುತ್ತಿದೆ.

ಉ) ಸ್ಕ್ಯಾನಿಂಗ್ ಕೆಲಸವನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಮೆ: CMS Computers Limited (Computer Maintenance Services Computers Limited) ರವರಿಗೆ ಹಾಗೂ ರಾಜ್ಯದ ಇತರ 23 ಜಿಲ್ಲೆಗಳ ಸ್ಕ್ಯಾನಿಂಗ್ ಕೆಲಸವನ್ನು ಮೆ: ECIL (Electronic Corporation of India Limited) ರವರಿಗೆ ಟೆಂಡರ್ ಕರೆಯುವ ಮೂಲಕ ವಹಿಸಿಕೊಡಲಾಗಿದೆ. ಸದರಿ ಕಂಪನಿಗಳ ಕಂಪ್ಯೂಟರ್ ಆಪರೇಟರ್‌ಗಳು ಸ್ಕ್ಯಾನಿಂಗ್ ಕೆಲಸವನ್ನು ನಿರ್ವಹಿಸುತ್ತಿರುವರು.

ಊ) ಸ್ಕ್ಯಾನಿಂಗ್ ಕೆಲಸವನ್ನು ಪೂನಾ ಮೂಲದ ಯಾವುದೇ ಖಾಸಗಿ ಸಂಸ್ಥೆಗೆ ವಹಿಸಿಕೊಟ್ಟಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ಎ) ಅನ್ವಯಿಸುವುದಿಲ್ಲ.

ಏ) ಅನ್ವಯಿಸುವುದಿಲ್ಲ.

ಐ) ಅನ್ವಯಿಸುವುದಿಲ್ಲ.

ಒ) ಟೆಂಡರ್ ಮೂಲಕ ಸದರಿ ಕೆಲಸವನ್ನು ಮೆ:ಸಿಎಂಎಸ್ ಕಂಪ್ಯೂಟರ್ಸ್ ಹಾಗೂ ಮೆ:ಇಸಿಐಎಲ್ ರವರಿಗೆ ಕೊಟ್ಟಿರುವುದರಿಂದ ಈ ಕುರಿತಂತೆ ಯಾವುದೇ ಕ್ರಮವಿರುವುದಿಲ್ಲ.

ಅನುಬಂಧ–ಅ

ಜಿಲ್ಲಾವಾರು ಉಪ ನೋಂದಣಿ ಕಛೇರಿಗಳ ಸಂಖ್ಯೆ

(ವಿಧಾನ ಸಭೆಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1528)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಉಪ ನೋಂದಣಿ ಕಛೇರಿಗಳ ಸಂಖ್ಯೆ
1	ಬೆಂಗಳೂರು ನಗರ	13
2	ಬೆಂಗಳೂರು ಗ್ರಾಮಾಂತರ	8
3	ಬಾಗಲಕೋಟೆ	7
4	ಬೆಳಗಾಂ	13
5	ಬಳ್ಳಾರಿ	9
6	ಬೀದರ್	5
7	ಬಿಜಾಪುರ	5
8	ಚಾಮರಾಜನಗರ	6
9	ಚಿಕ್ಕಮಗಳೂರು	7
10	ಚಿತ್ರದುರ್ಗ	6
11	ದಕ್ಷಿಣ ಕನ್ನಡ (ಮಂಗಳೂರು)	9
12	ದಾವಣಗೆರೆ	6
13	ಧಾರವಾಡ	5
14	ಗದಗ	5
15	ಗುಲ್ಬರ್ಗಾ	10
16	ಹಾಸನ	10

17	ಹಾವೇರಿ	7
18	ಕೊಡಗು (ಮಡಿಕೇರಿ)	4
19	ಕೋಲಾರ	11
20	ಕೊಪ್ಪಳ	4
21	ಮಂಡ್ಯ	8
22	ಮೈಸೂರು	11
23	ರಾಯಚೂರು	5
24	ಶಿವಮೊಗ್ಗ	7
25	ತುಮಕೂರು	11
26	ಉಡುಪಿ	6
27	ಉತ್ತರ ಕನ್ನಡ (ಕಾರವಾರ)	5
	27 ಜಿಲ್ಲೆಗಳು	**203**

1051 (1091) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೃಷಿ ಯೋಗ್ಯ ಭೂಮಿ ಬಹಳ ಕಡಿಮೆ ಇರುವುದರಿಂದ ಭೂ ರಹಿತ ಬಡವರು ಅರಣ್ಯ ಭೂಮಿ ಅತಿಕ್ರಮಣ ಮಾಡಿಕೊಂಡು ಉಪಜೀವನ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂತಹ ಬಡ ಅತಿಕ್ರಮಣದಾರರ ಭೂಮಿಯನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಇ) ಹಾಗಿದ್ದಲ್ಲಿ, ಸಕ್ರಮಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿ ಅತಿಕ್ರಮಣ ಮಾಡಿಕೊಂಡು ಜೀವನ ಸಾಗಿಸುತ್ತಿರುವುದು ಗಮನಕ್ಕೆ ಬಂದಿದೆ.

ಆ) ದಿನಾಂಕ: 24-10-1980ರ ಮತ್ತು ಅದಕ್ಕಿಂತ ಹಿಂದಿನ ಅತಿಕ್ರಮಣದಾರರಿಗೆ ಅನಧಿಕೃತ ಒತ್ತುವರಿಯನ್ನು ದಿನಾಂಕ: 5-5-1997ರ ಸರ್ಕಾರಿ ಆದೇಶದನ್ವಯ ಸಕ್ರಮಗೊಳಿಸುವ ಉದ್ದೇಶ ಇದೆ. ಅದಲ್ಲದೆ ಇತ್ತೀಚೆಗೆ ಕೇಂದ್ರ ಸರ್ಕಾರ ಪತ್ರ ದಿನಾಂಕ: 03.11.2005 ಹಾಗೂ ರಾಜ್ಯ ಸರ್ಕಾರ ಆದೇಶ ದಿನಾಂಕ 06.03.2006 ರಲ್ಲಿ ಅರಣ್ಯ ಭೂಮಿಯ ಮೇಲೆ ಬುಡಕಟ್ಟು ಜನಾಂಗದವರು ಮತ್ತು ಅರಣ್ಯವಾಸಿಗಳು ಹೊಂದಿರುವ ಹಕ್ಕುಗಳ ದೃಢೀಕರಣಕ್ಕೆ ಸಂಬಂಧಿಸಿದಂತೆ ನಿರ್ಣಯವನ್ನು ತೆಗೆದುಕೊಂಡು ಸರ್ಕಾರಕ್ಕೆ ವರದಿ ನೀಡುವುದಕ್ಕೋಸ್ಕರ ಗ್ರಾಮ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ